SEPTEMBER 29, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಸ್ವಸ್ಥ ನಾರಿ, ಸಶಕ್ತ ಪರಿವಾರ; ರಾಜ್ಯಾದ್ಯಂತ, ಅಕ್ಟೋಬರ್ 16ರ ವರೆಗೆ, 8ನೇ ರಾಷ್ಟ್ರೀಯ ಪೋ ’ಣ ಮಾಸಾಚರಣೆ.**
- **ರಾಜ್ಯದ 148 ತಾಲೂಕು ಆಸ್ಪತ್ರೆಗಳಲ್ಲಿ, 24 ಗಂಟೆಯೂ, ತ್ರಿವಳಿ ತಜ್ಞ ವೈದ್ಯರ ಲಭ್ಯತೆಗೆ, ಆರೋಗ್ಯ ಇಲಾಖೆ, ಕ್ರಮ.**
- **‘ಜಿ.ಎಸ್.ಟಿ ಬಚತ್ ಉತ್ಸವ್’; ಸ್ವದೇಶಿ ವಸ್ತುಗಳ ಖರೀದಿಗೆ, ಪ್ರೋತ್ಸಾಹದಾಯಿ – ಪ್ರಧಾನಮಂತ್ರಿ ‘ಮನ್ ಕಿ ಬಾತ್’.**
- **ಇಂದು, ‘ವಿಶ್ವ ಹೃದಯ ಆರೋಗ್ಯ’ ಜಾಗ್ರತಿ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**8ನೇ ರಾಷ್ಟ್ರೀಯ ಪೋ ’ಣಮಾಸಾಚರಣೆ, ಈ ತಿಂಗಳ 17 ರಿಂದ ಆರಂಭವಾಗಿದೆ. ಅಕ್ಟೋಬರ್ 16ರ ತನಕ, ರಾಜ್ಯಾದ್ಯಂತ ಈ ಅಭಿಯಾನ ನಡೆಯಲಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, 2024–25ನೇ ಸಾಲಿನಲ್ಲಿ, 1 ಲಕ್ಷದ 10 ಸಾವಿರ ಮಕ್ಕಳು, ರಾಜ್ಯದಲ್ಲಿ ಅಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿವೆ. ಆ ಪೈಕಿ, 9 ಸಾವಿರದ 5 ನೂರಾ 26 ಮಕ್ಕಳು, ತೀವ್ರ ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು, ವರದಿ ತಿಳಿಸಿದೆ.**

**ಈ ಕುರಿತು ಒಂದು ವರದಿ..**

***‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಧ್ಯೇಯದೊಂದಿಗೆ, ಕೇಂದ್ರ ಸರ್ಕಾರ, ಅಪೌಷ್ಟಿಕತೆ ನಿವಾರಿಸಲು, ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲಿ, ಅಂಗನವಾಡಿಗಳ ಮೂಲಕ, ಶೈಶವಾವಸ್ಥೆ ಮತ್ತು ಬಾಲ್ಯಾವಸ್ಥೆ ಮಕ್ಕಳು, ಗರ್ಭಿಣಿಯರು, ಬಾಣಂತಿಯರಿಗೆ ಹಾಗೂ ಯುವ ತಾಯಂದಿರಿಗೆ, ಪೌಷ್ಟಿಕ ಆಹಾರ, ಸೂಕ್ತ ಆರೈಕೆ ಮತ್ತು ಚಿಕಿತ್ಸೆ ಒದಗಿಸಲು, ಯೋಜಿಸಿದೆ.***

*ಕಲ್ಯಾಣ ಕರ್ನಾಟಕದ, ವಿಜಯನಗರ ಜಿಲ್ಲೆಯಲ್ಲಿ, ಅತಿ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿವೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ, ವಿಶೇಷ ಯೋಜನೆಯನ್ನು, ಇಲ್ಲಿನ ಮಕ್ಕಳ ಆರೋಗ್ಯ ಸುಧಾರಣೆಗಾಗಿ ರೂಪಿಸಿದೆ.*

*ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ, ಸಮತೋಲಿತ ಆಹಾರ ಅವಶ್ಯ ಎನ್ನುತ್ತಾರೆ, ಬೆಂಗಳೂರಿನ ಬಿ.ಆರ್.ಅಂಬೇಡ್ಕರ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ, ಪೌಷ್ಟಿಕ ಆಹಾರ ತಜ್ಞೆ ಶ್ವೇತಾ ಕ್ಯಾತನಗೌಡರ.*

<><><>

ವಿವೇಕ (44) + ಶ್ವೇತಾ ಕ್ಯಾತನಗೌಡರ (60)ಧ್ವನಿ ಸೆಕೆಂದುಗಳು

<><><>

ತಾಯಿ ಮತ್ತು ನವಜಾತ ಶಿಶುಗಳ, ಮರಣ ಪ್ರಮಾಣವನ್ನು ತಗ್ಗಿಸಲು, ತಾಲೂಕು ಮಟ್ಟದ 148 ಆಸ್ಪತ್ರೆಗಳಲ್ಲಿ, ಇನ್ನು ಮುಂದೆ, ದಿನದ 24 ಗಂಟೆಯೂ, ಸ್ತ್ರೀ ಆರೋಗ್ಯ, ಅರವಳಿಕೆ ಮತ್ತು ಮಕ್ಕಳ ವೈದ್ಯರು – ತ್ರಿವಳಿ ತಜ್ಞರ ಲಭ್ಯತೆ ಖಾತ್ರಿ ಪಡಿಸಲಾಗುವುದು ಎಂದು, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ತಾಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ, ತಜ್ಞ ವೈದ್ಯರ ಸಂಖ್ಯೆ ಹೆಚ್ಚಿಸಲು, ಅಗತ್ಯಕ್ಕಿಂತ ಹೆಚ್ಚಿನ ತಜ್ಞರನ್ನು, ಕೊರತೆ ಇರುವಲ್ಲಿ ನಿಯೋಜಿಸಲಾಗುವುದು ಎಂದು, ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

<><><>

ರಾಯಚೂರಿನಲ್ಲಿ ಮಾತನಾಡಿದ, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ, 16 ಆರೋಗ್ಯ ಕೇಂದ್ರಗಳನ್ನು ಜಿಲ್ಲೆಗೆ ಮಂಜೂರು ಮಾಡಿದ್ದಾಗಿ, ತಿಳಿಸಿದರು.

<><><>

ನಮ್ಮ ಹಬ್ಬಗಳ ಆಚರಣೆಯ ಸಂಭ್ರಮ ಮತ್ತು ಮೆರಗು ದುಪ್ಪಟ್ಟಾಗುವುದು, ಸ್ವದೇಶಿ ವಸ್ತುಗಳ ಖರೀದಿ ಮತ್ತು ಬಳಕೆ – 'ವೋಕಲ್ ಫಾರ್ ಲೋಕಲ್' ಮಂತ್ರದಿಂದ ಮಾತ್ರ; ಈ ಬಾರಿ 'ಜಿ.ಎಸ್.ಟಿ ಬಚತ್ ಉತ್ಸವ್' ಸಹ ಜೊತೆಗೂಡಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹೇಳಿದ್ದಾರೆ. ಆಕಾಶವಾಣಿಯ, ಜನಪ್ರಿಯ ಮನ್ ಕಿ ಬಾತ್ ನ, 126ನೇ ಸಂಚಿಕೆಯಲ್ಲಿ, ದೇಶ–ವಿದೇಶಗಳ ಭಾರತೀಯರೊಂದಿಗೆ, ಅವರು ತಮ್ಮ ಅನಿಸಿಕೆ ಹಂಚಿಕೊಂಡರು.

<><><>

ನರೇಂದ್ರ ಮೋದಿ ಧ್ವನಿ (ಸ್ವದೇಶಿ) (44) ಸೆಕೆಂದುಗಳು

<><><>

'ಸ್ವಚ್ಛತಾ ಹೀ ಸೇವಾ', ಸ್ವಚ್ಛ ಭಾರತ ಅಭಿಯಾನದ ಬಗ್ಗೆ, ವಿಶೇಷವಾಗಿ ಉಲ್ಲೇಖಿಸಿದ ಪ್ರಧಾನಮಂತ್ರಿಯವರು, ನಮ್ಮ ಮನೆಯಂತೆ, ನಗರವನ್ನೂ ಸ್ವಚ್ಛವಾಗಿ ಇರಿಸಲು, ಸಂಕಲ್ಪಿಸುವಂತೆ, ಮನವಿ ಮಾಡಿದರು.

<><><>

ನರೇಂದ್ರ ಮೋದಿ ಧ್ವನಿ (ಸ್ವಚ್ಛತೆ) (13) ಸೆಕೆಂದುಗಳು

<><><>

ಬೆಳಗಾವಿ ಜಿಲ್ಲೆ, ಭೀವಶಿ ಗ್ರಾಮದಲ್ಲಿ, ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ನೇತೃತ್ವದಲ್ಲಿ, ಮನ್ ಕಿ ಬಾತ್ ಆಲಿಸಿ, ವೀಕ್ಷಿಸಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

<><><>

2021 ರಲ್ಲಿ ಚಾಲನೆ ನೀಡಲಾದ, ಪ್ರಧಾನಮಂತ್ರಿ ಗತಿಶಕ್ತಿ ಯೋಜನೆ, ಇಲ್ಲಿಯ ವರೆಗೆ, 13 ದಶಾಂಶ 5-9 ಲಕ್ಷ ಕೋಟಿ ರೂಪಾಯಿ ಮೌಲ್ಯದ, 293 ಮೂಲಸೌಕರ್ಯ ಯೋಜನೆಗಳನ್ನು, ನೆಟ್‌ವರ್ಕ್ ಪ್ಲ್ಯಾನಿಂಗ್ ಗ್ರುಪ್ – ಎನ್.ಪಿ.ಜಿ. ಕಾರ್ಯವಿಧಾನದ ಮೂಲಕ, ಮೌಲ್ಯಮಾಪನ ಮಾಡಲಾಗಿದೆ. ಪಿ.ಎಂ. ಗತಿಶಕ್ತಿ ಯೋಜನೆ, 2047ರ ವೇಳೆಗೆ, ಅಭಿವೃದ್ಧಿ ಹೊಂದಿದ ಭಾರತವನ್ನು ರೂಪಿಸುವತ್ತ, ಗಮನ ಕೇಂದ್ರೀಕರಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಬಣ್ಣಿಸಿದಂತೆ, "ರೇಲ್ವೆಯಿಂದ ಹೆದ್ದಾರಿಗಳ ವರೆಗೆ, ಬಂದರುಗಳಿಂದ ವಿಮಾನ ನಿಲ್ದಾಣಗಳ ವರೆಗೆ, ವೇಗವಾಗಿ ವಿಸ್ತರಿಸುತ್ತಿರುವ ಭಾರತದ ಮೂಲಸೌಕರ್ಯ ಜಾಲ, ಜೀವನದ ಸುಲಭತೆ ಮತ್ತು ಸಮೃದ್ಧಿಯನ್ನು ಹೆಚ್ಚಿಸುತ್ತಿದೆ."

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 15 ಸೆಕೆಂದುಗಳು

<><><>

'ನಿಮ್ಮ ಹೃದಯದ ಬಡಿತವನ್ನು ತಪ್ಪಿಸಿಕೊಳ್ಳಬೇಡಿ' ಎಂಬ ಧ್ಯೇಯದೊಂದಿಗೆ, ವಿಶ್ವ ಹೃದಯ ಆರೋಗ್ಯ ಜಾಗ್ರತಿ ದಿನವನ್ನು, ಇಂದು ಆಚರಿಸಲಾಗುತ್ತಿದೆ. ಹೃದಯ ಸಂಬಂಧಿ ಕಾಯಿಲೆ ಬಗ್ಗೆ, ಜನ ಜಾಗೃತಿ ಮೂಡಿಸುವ ಜಾಗತಿಕ ಅಭಿಯಾನವಾಗಿದೆ. ಆರೋಗ್ಯಕರ ಜೀವನ ಶೈಲಿಯನ್ನು ಕಾಪಾಡಿಕೊಳ್ಳುವ ಮತ್ತು ತೀವ್ರವಾದ ಹೃದಯ ಸಂಬಂಧಿ ಕಾಯಿಲೆ ತಡೆಗಟ್ಟಲು, ನಿಯಮಿತ ತಪಾಸಣೆಗಳಿಗೆ ಆದ್ಯತೆ ನೀಡುವ ಮಹತ್ವವನ್ನು ಈ ದಿನ ಒತ್ತಿ ಹೇಳುತ್ತದೆ.

<><><>

ಮಳೆ ಹಾಗೂ ಪ್ರವಾಹದಿಂದ, ಸತತ ಸಂಕಷ್ಟಕ್ಕೀಡಾಗುವ, ರಾಜ್ಯದ ಜಿಲ್ಲೆಗಳಲ್ಲಿ, ಸಮಗ್ರ ನಿರ್ವಹಣಾ ಯೋಜನೆ ರೂಪಿಸುವಂತೆ, ಜಾತ್ಯತೀತ ಜನತಾ ದಳದ ಮುಖಂಡರು, ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬೆಳಗಾವಿ, ಉತ್ತರಕನ್ನಡ ಸೇರಿದಂತೆ, ನದಿ ಪಾತ್ರದ ತಾಲೂಕುಗಳ ಸ್ಥಳಾಂತರ ಮತ್ತು ರಕ್ಷಣೆಗೆ, ವಿಶೇಷ ಪೂರ್ವ ಸಿದ್ಧತೆ ಹಾಗೂ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಾಚರಣೆ ಕೈಗೊಳ್ಳಲು, ಅನುವಾಗುವಂತೆ ಯೋಜನೆ ರೂಪಿಸುವಂತೆ, ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ.

<><><>

ಭೀಮಾ ನದಿ ಪ್ರವಾಹಕ್ಕೆ ತುತ್ತಾದ, ಕಲಬುರಗಿ ಜಿಲ್ಲೆಯ 68 ಗ್ರಾಮಗಳಲ್ಲಿ 41 ಕಾಳಜಿ ಕೇಂದ್ರಗಳನ್ನು ತೆರೆದು, 4 ಸಾವಿರದ 7 ನೂರಾ 15 ಜನ ಸಂತ್ರಸ್ತರಿಗೆ, ಜಿಲ್ಲಾಡಳಿತ ತಾತ್ಕಾಲಿಕ ಪುನರ್ವಸತಿ ಕಲ್ಪಿಸಿದೆ.

<><><>

ಯಾದಗಿರಿ ಜಿಲ್ಲೆಯ, ಶಹಾಪುರ ಹಾಗೂ ನಾಯ್ಕಲ್ ಸೇರಿದಂತೆ, 10ಕ್ಕೂ ಹೆಚ್ಚು ಗ್ರಾಮಗಳಿಗೆ, ಭೀಮಾ ನದಿ ನೀರು ನುಗ್ಗಿದೆ. ಹುರಸಗುಂಡಗಿ ಗ್ರಾಮದ, 5 ಕುಟುಂಬಗಳನ್ನು, ಕಾಳಜಿ ಕೇಂದ್ರಕ್ಕೆ ಜಿಲ್ಲಾಡಳಿತ ಸ್ಥಳಾಂತರಿಸಿದೆ. ಭೀಮಾ ನದಿ ಪಾತ್ರದ ಗ್ರಾಮಗಳ ಜನ, ಮುಂಜಾಗ್ರತೆ ವಹಿಸುವಂತೆ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ, ಮುನ್ನೆಚ್ಚರಿಕೆ ನೀಡಲಾಗಿದೆ.

<><><>

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ, ಪ್ರವಾಹ ಬಾಧಿತ ಅಲ್ಲೀಪುರ ಹಾಗೂ ತಾಂಡಾಕ್ಕೆ ತೆರಳಿ, ಪರಿಸ್ಥಿತಿ ಅವಲೋಕಿಸಿದರು. ಮುಖ್ಯಮಂತ್ರಿಯವರೊಂದಿಗೆ, ಪ್ರವಾಹ ಪರಿಸ್ಥಿತಿ ಕುರಿತು ಸಮಾಲೋಚಿಸಿದ್ದಾಗಿ, ತಿಳಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ ಕಲಬುರಗಿಯ ನೆರೆ ಬಾಧಿತ ಪ್ರದೇಶಗಳಿಗೆ ತೆರಳಿ, ಪರಿಶೀಲಿಸಲಿದ್ದಾರೆ. ಬೀದರ, ಕಲಬುರಗಿ, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಯ ಅಧಿಕಾರಿಗಳು ಬಳಿಕ, ಮುಖ್ಯಮಂತ್ರಿಯವರ ಸಭೆಯಲ್ಲಿ ಭಾಗವಹಿಸಲಿದ್ದಾರೆ.

<><><>

ಮೈಸೂರು ದಸರಾ ಕುಸ್ತಿ ಪಂದ್ಯದಲ್ಲಿ, ಬೆಳಗಾವಿಯ ಪೈಲ್ವಾನ್ ಕಾಮೇಶ ಪಾಟೀಲ'ದಸರಾ ಕಂಠೀರವ' ಹಾಗೂ ಉತ್ತರಕನ್ನಡದ ಕುಸ್ತಿಪಟು ಮಂಜುನಾಥ, 'ದಸರಾ ಕೇಸರಿ'ಯಾಗಿ, ಹೊರಹೊಮ್ಮಿದ್ದಾರೆ. ಮೈಸೂರಿನ ದೊಡ್ಡಕೆರೆ ಮೈದಾನದ, ಡಿ.ದೇವರಾಜ ಅರಸು, ವಿವಿಧೋದ್ದೇಶ ಕ್ರೀಡಾಂಗಣದ ಅಖಾಡಾದಲ್ಲಿ ಜರುಗಿದ, 80 ಕಿಲೋ ವಿಭಾಗದಲ್ಲಿ, ಕಾಮೇಶ, ಭದ್ರಾವತಿಯ ಪೈಲ್ವಾನ್ ಕಿರಣ ಅವರನ್ನು, 2–1 ಅಂಕಗಳಿಂದ ಮಣಿಸಿದರು. ಉತ್ತರಕನ್ನಡದ ಮಂಜುನಾಥ, ಬೆಳಗಾವಿಯ ಕುಸ್ತಿಪಟು ಪರಮಾನಂದ ಅವರನ್ನು 4–2 ಅಂಕಗಳ ಅಂತರದಿಂದ ಪರಾಭವಗೊಳಿಸಿದರು.

<><><>

ವಿಜಯಪುರದ, ವಚನ ಪಿತಾಮಹ, ಫ.ಗು.ಹಳಕಟ್ಟಿ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದು ಬೆಳಗ್ಗೆ 10 ಗಂಟೆಗೆ, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಗಾತ್ರದ ಕೈಗಾರಿಕೆ, ಉದ್ದಿಮೆಗಳ, ಸ್ಟಾರ್ಟ್‌ಅಪ್ ಮತ್ತು ಇನ್‌ಕ್ಯುಬೇಷನ್‌ಗಳ ಕಾರ್ಯಕ್ಷಮತೆಯ, ವೇಗವರ್ಧಿಸುವ ಕಾರ್ಯಾಗಾರ, ಆಯೋಜಿತವಾಗಿದೆ.

<><><>

‘ನೀವು, ನಾವು ಹಾಗೂ ಸಮುದಾಯ ಈಗಲೇ ಕಾರ್ಯಪ್ರವೃತ್ತರಾಗೋಣ’, ಎಂಬ ಧ್ಯೇಯದೊಂದಿಗೆ, ‘ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ’ ಜರುಗಿತು. ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ರಾಜ್ಯಾದ್ಯಂತ ಉಚಿತ ರೇಬಿಸ್ ಲಸಿಕೆ ಅಭಿಯಾನ ಆಯೋಜಿಸಿತ್ತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸ್ವಸ್ಥ ನಾರಿ, ಸಶಕ್ತ ಪರಿವಾರ; ರಾಜ್ಯಾದ್ಯಂತ, ಅಕ್ಟೋಬರ್ 16ರ ವರೆಗೆ, 8ನೇ ರಾಷ್ಟ್ರೀಯ ಪೋ ’ಣ ಮಾಸಾಚರಣೆ.
- ರಾಜ್ಯದ 148 ತಾಲೂಕು ಆಸ್ಪತ್ರೆಗಳಲ್ಲಿ, 24 ಗಂಟೆಯೂ, ತ್ರಿವಳಿ ತಜ್ಞ ವೈದ್ಯರ ಲಭ್ಯತೆಗೆ, ಆರೋಗ್ಯ ಇಲಾಖೆ, ಕ್ರಮ.
- ‘ಜಿ.ಎಸ್.ಟಿ ಬಚತ್ ಉತ್ಸವ್’; ಸ್ವದೇಶಿ ವಸ್ತುಗಳ ಖರೀದಿಗೆ, ಪ್ರೋತ್ಸಾಹದಾಯಿ – ಪ್ರಧಾನಮಂತ್ರಿ ‘ಮನ್ ಕಿ ಬಾತ್’.
- ಇಂದು, ‘ವಿಶ್ವ ಹೃದಯ ಆರೋಗ್ಯ’ ಜಾಗ್ರತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>